ಕಾಲೇಜಿನ ಕಡೆ ಚಲಿಸಿದ ತನ್ನ ವಾಹನವನ್ನು.

ಅವೊತ್ತು ಸಂಜೆ. ಸಂಜೆಯ ಬಯೋಮ್ಯಾಟ್ರಿಕ್ಸ್ ಅನ್ನು ಕೊಟ್ಟು ಹೊರಬಂದಳು. ಒಂದು ಕಲ್ಲು ಬೆಂಚಿನ ಮೇಲೆ ಕುಳಿತುಕೊಂಡಿದ್ದ. ಅವನು ಕಾಲೇಜಿನಲ್ಲಿ ಕಾಣದಿದ್ದುದನ್ನು ಗಮನಿಸಿದ್ದಳು. ನೇರ ಪುನರ್ವಸು ಕುಳಿತಿದ್ದ ಕಲ್ಲುಬೆಂಚಿನ ಬಳಿ ಬಂದಳು. ಎಲ್ಲಿಗೆ ಹೋಗಿದ್ದೆ, ಕಾಣಲಿಲ್ಲ, ಫೋನ್ ಸ್ವಿಚ್ಡಾಫ್ ಇಡೀ ದಿನ. ಈಗ ಬಂದಿದೀನಲ್ಲ. ಇದು ಉತ್ತರ ಅಲ್ಲ. ಸರಿ, ಬೈ ದ ವೇ, ಇವೊತ್ತು ನ್ಯಾಷನಲ್ ವೈಲ್ಡ್ ಲೈಫ್ ಡೇ, ಏನು ಮಾಡದಿರಿ ಡಿಪಾರ್ಟ್ಮೆಂಟಲ್ಲಿ? ಮೊನ್ನೆ ಸೆಪ್ಟೆಂಬರ್ ತಿಂಗಳಿನಲ್ಲೂ ಮಾಡಿದ್ರಲ್ಲ, ಹೌದು, ಈಗ ಇದನ್ನ ಫೆಬ್ರುವರಿಲೂ ಮಾಡ್ತಾರೆ. ಸ್ಟೂಡೆಂಟ್ಸ್‌ಗಳಿಗೆ ಬಿ.ಬಿ.ಸಿ.ಯ ಎಂಡೇಜರ್ಡ್ ಫ್ರಾಗ್ಸ್ ಮೇಲಿನ ಒಂದು ಡಾಕ್ಯುಮೆಟರಿ ತೋರಿಸಿದಿವಿ, ಮತ್ತೇನಿಲ್ಲ. ವೈಲ್ಡ್ ಡೇ ಪ್ರಯುಕ್ತ ಸುಪಿಗು ನನಗೂ ಟ್ರೀಟ್ ಕೊಡಿಸು. ಬೆಳಗ್ಗೆ ಗಂಭೀರವಾಗಿ ಮಾತನಾಡಿದ್ದ ಅವಳ ಮುಖದಲ್ಲಿ ಏನೋ ಒಂಥರ ಚೇತನ ತುಂಬಿಕೊಂಡಿತ್ತು. ಇವೊತ್ತು ಮಧ್ಯಾಹ್ನ ಯಾಕೋ ತೀವ್ರವಾಗಿ ಕಾಡಿದೆ, ಸಿಕ್ಕಾಪಟ್ಟೆ ನೆನಪಾದೆ. ನಿಜ!? ನಿಜ. ಅವನಿಗೆ ತಕ್ಷಣಕ್ಕೆ ತನಗೆ ಮಧ್ಯಾಹ್ನ ಕೋಟೆಯ ಕಲ್ಲಿನ ಅಂಕಲಿ ಮಠದಲ್ಲಿ ಆದ ಅನುಭವ ನೆನಪಾಯಿತು. ಕತ್ತಲು, ಬೆಳಕಿನ ಕಿರಣ, ಅದರೊಳಗಿನ ಅಣುಕಣಗಳು ಕೈಗೆ ಅಂಟಿಕೊಂಡಂತಹ ಅನುಭವ. ಎಲ್ಲಿಗೆ ಹೋಗಿದ್ದೆ? ಅವನು ಕಣ್ಣಲ್ಲೇ ನಕ್ಕ.

ಇವೊತ್ತು ನನ್ನ ಗಾಡಿಯನ್ನು ಕಾಲೇಜಿನಲ್ಲಿ ಬಿಟ್ಟು ನಿನ್ನ ಸ್ಕೂಟರಿನಲಿ ಬರುತೀನಿ. ಯಾಕೆ? ಸುಮ್ಮನೆ. ತನ್ನ ಗಾಡಿಯನ್ನು ಸ್ಟಾರ್ಟ್ ಮಾಡಿದಳು. ಪುನರ್ವಸು ಅವಳ ಹಿಂದೆ ಬಂದು ಕುಳಿತ. ಗಾಡಿ ಮುಂದಕ್ಕೆ ಸಾಗುತ್ತಿತ್ತು. ಕಿರಣ, ಯಾಕೋ ಇತ್ತೀಚಿನ ಕೆಲವು ದಿನಗಳಿಂದ ಡಿಸ್ಟರ್ಬ್ ಆಗಿದ್ದೀಯ. ಸ್ವಲ್ಪ ದಿನಗಳ ಕಾಲ ನಿಮ್ಮ ಅಮ್ಮನ ಮನೆಗೆ ಹೋಗಿ ಇದ್ದು ಬಾ, ಸುಪಿನು ಕರೆದುಕೊಂಡು ಹೋಗು. ಇವೊತ್ತು ಸಂಜೇನೆ. ನಾನೇ ಬಿಟ್ಟು ಬರುವೆ. ಅವರು ಅದನ್ನೇ ಹೇಳೋದು. ನೀನು ಹೇಳಿದ್ದನ್ನೇ ಬೇರೆ ರೀತಿ ಹೇಳಿ ಸಮಾಧಾನ ಮಾಡಿ ವಾಪಸ್ಸು ಕಳುಹಿಸುತ್ತಾರೆ. ನಾನು ಹೋಗೊಲ್ಲ. ಒಂದು ಮಾತು ಹೇಳ್ಲ. ಒಂದೇನು ಸಾವಿರ ಹೇಳಿದ್ದೀಯ ಆಗಲೆ. ಆದರೆ, ಹೇಳಿದ್ದನ್ನೇ ಹೇಳಬೇಡ. ಅವನು ಮುಂದಕ್ಕೆ



ಒಂದು ನುಡಿಯನ್ನು ನುಡಿಯಲಿಲ್ಲ. ಮನೆಯನ್ನು ತಲುಪಿದರು. ಮನೆಯ ಮುಂದಿನ ಅಂಗಳದಲ್ಲಿನ ತಂತಿಯ ಮೇಲೆ ಕಿರಣ ತನ್ನ ಕೈಯಾರೆ ಹಳೆಯ ಸೀರೆ, ವಸ್ತ್ರಗಳನ್ನೆಲ್ಲ ಸೇರಿಸಿ ಹೊಲಿದ್ದಿದ್ದ ಬಣ್ಣಬಣ್ಣದ ಕೌದಿ ಗಾಳಿಗೆ ಹಾರಾಡುತ್ತಿತ್ತು.

ಹೊರಗಿನ ಜಗಲಿಯ ಮೇಲೆ ಸುಪರ್ಣ ಬಿಳಿ ಹಾಳೆಯ ಮೇಲೆ ಸೀಸದ ಕಡ್ಡಿಯನ್ನು ಹಿಡಿದುಕೊಂಡು ಆನೆಯ ಚಿತ್ರವನ್ನು ಬಿಡಿಸುತ್ತಿದ್ದಳು. ಅದರ ಸೊಂಡಿಲು ಹಾಳೆಯ ಆಚೆ ಮೇಲಕ್ಕೆ ಚಾಚಿತ್ತು. ರಾತ್ರಿಯ ಬಣ್ಣ ಆಕಾಶದ ತುಂಬ ನಿಧಾನ ಅಡರಿಕೊಳ್ಳುತ್ತಿತ್ತು. ಇನ್ನೂ ಕತ್ತಲು ತನ್ನ ತೀವ್ರತೆಯನ್ನು ಪಡೆದುಕೊಂಡು, ಗಗನದಲ್ಲಿ ಹೊಳೆಯಬೇಕಿದ್ದ ನಕ್ಷತ್ರಗಳು ಆ ಪುಟ್ಟ ಜೋಡಿ ನಯನಗಳಲ್ಲಿ ಹೊಳೆಯುತ್ತಿದ್ದವು.

●